ನಿರೂಪಣೆ, ತಾನು ಓದುಗನ ಜೊತೆಜೊತೆಗೇ ನಿಂತು ಈ ಕತೆಯನ್ನು ಕಾಣುತ್ತಿದ್ದೇನೆಂಬ ಸಖನ ಧ್ವನಿ ಕತೆಗಾರನಿಗೆ ತನ್ನ ಓದುಗನನ್ನು ಒಲಿಸಿಕೊಳ್ಳಲು ಸಹಾಯಕವಾಗಿ ಒದಗಿ ಬರುತ್ತದೆ. ಇಲ್ಲ, ನಾನು ಓದುಗನಿಗಿಂತ (ಪ್ರತ್ಯಕ್ಷವಾಗಿ ಇದನ್ನು ಕತೆಗಾರ ಧ್ವನಿಸುವುದು "ತನ್ನ ಪಾತ್ರಗಳಿಗಿಂತ" ಎಂಬ ನೆಲೆಯಲ್ಲಿ) ಸ್ವಲ್ಪ ಮೇಲ್ಮಟ್ಟದವನು ಎಂಬ ಧ್ವನಿ ಕತೆಯ ನಿರೂಪಣೆಯಲ್ಲಿ ಕಾಣಿಸಿಕೊಂಡರೆ, ಓದುಗ ಬಹುಬೇಗ ಆ ಕತೆಗಾರನನ್ನು ವಿಮರ್ಶಕ ದೃಷ್ಟಿಯಿಂದ, ಕೊಂಚ ಇರುಸುಮುರುಸಿನೊಂದಿಗೆ ಕಾಣುವುದು ಸಹಜ ಮತ್ತು ನಿರೀಕ್ಷಿತ.

ಈ ರೀತಿ ಇಲ್ಲಿ ಕತೆಗಾರ, ಕತೆಯನ್ನು ಕತೆಯೊಳಗಿಂದ ನಿರೂಪಿಸುತ್ತಿರುವ ನಿರೂಪಕ ಅಥವಾ ಅಂಥ ಒಂದು ಪ್ರಜ್ಞೆ, ಕತೆಯ ಪಾತ್ರಗಳು ಎಂಬ ತ್ರಿಕೋನದ ಜೊತೆ ಓದುಗನ ಸಂಬಂಧವೇನಿದೆ ಅದು ಒಪ್ಪಿಕೊಂಡು ಓದುವ ಪ್ರೀತಿಯ ನೆಲೆಯಿಂದ ಕೊಂಚ ಜಾರಿ, ಈ ಯಾವತ್ತೂ ವಿವರಗಳ ಔಚಿತ್ಯ ಮತ್ತು ಉದ್ದೇಶವನ್ನು ಪ್ರಶ್ನಿಸುತ್ತ ಓದುವ ನಿಷ್ಠುರ ಓದುಗನ ನೆಲೆಗೆ ವರ್ಗಾವಣೆಯಾಗುತ್ತದೆ. ಇಂಥ ಓದುಗನ ಮೆಚ್ಚುಗೆ ಗಿಟ್ಟಿಸಿಕೊಳ್ಳುವುದು ಅಷ್ಟೇನೂ ಸುಲಭದ ಕೆಲಸವಲ್ಲ. ಈ ಅಗ್ನಿಪರೀಕ್ಷೆಯಲ್ಲಿ ಪಾಸಾಗುವ ಲೇಖಕರು ಕಡಿಮೆ. ಛಾಯಾ ಭಟ್ ಇಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗುತ್ತಾರೆ ಎನ್ನುವುದೇ ಈ ಕತೆಗಳನ್ನು ಸೂಕ್ಷ್ಮವಾಗಿ ಓದಲು ನಮಗಿರುವ ಸವಾಲು ಮತ್ತು ಮೆಚ್ಚುಗೆ.

ಒಂದೊಂದಾಗಿ ಇಲ್ಲಿನ ಕತೆಗಳ ವಿಚಾರಕ್ಕೆ ಬಂದರೆ, ಇಲ್ಲಿನ ಎಲ್ಲಾ ಕತೆಗಳೂ ಸಾಕಷ್ಟು ಸಂಕೀರ್ಣ ರಚನೆಗಳೇ. ಅವುಗಳ ಪಾತ್ರ ಪ್ರಪಂಚ ದೊಡ್ಡದು ಮತ್ತು ಅವು ತಮ್ಮ ತೆಕ್ಕೆಯೊಳಗೆ ಸೆಳೆದುಕೊಳ್ಳುವ ಜಗತ್ತು ಕೂಡಾ ಹಿರಿದು. ಛಾಯಾ ಭಟ್ ಅವರಿಗೆ ಕಥನ ಮುಖ್ಯವಾಗಿ ಅದರ ಗಮ್ಯ ಮುಖ್ಯವಾಗದಿರುವುದು ಇದಕ್ಕೆ ಒಂದು ಕಾರಣವಾದರೆ, ಅವರು ಕಟ್ಟಿಕೊಡುವ ಬದುಕಿನ ವಾಸ್ತವದ ವಿವರಗಳು, ನಡೆನುಡಿಗಳು ಮತ್ತು ಬದುಕಿನ ಕ್ಷುದ್ರತೆ ಎಂದು ಸ್ಥೂಲವಾಗಿ ಗುರುತಿಸಬಹುದಾದ ಒಂದು ಅಂಶ ಅವರಿಗೆ ಕಥನಕ್ಕಿಂತ ಹೆಚ್ಚು ಮುಖ್ಯ ಅನಿಸಿರುವುದು ಇನ್ನೊಂದು ಕಾರಣ. ಇವೆರಡೂ ಒಂದೇ ಅಲ್ಲ. ಮನುಷ್ಯನನ್ನು ಒಂದು ಕತೆಯ ಪಾತ್ರವಾಗಿಯಷ್ಟೇ ಕಾಣದ, ಅವನನ್ನು ಮನುಷ್ಯನನ್ನಾಗಿಯೇ ಕತೆಯ ಚೌಕಟ್ಟಿಗೆ ತರುವ ಬಗೆಯಿದು. ಹಾಗಾಗಿ, ಛಾಯಾ ಭಟ್ ಅವರ ಕತೆಗಳಲ್ಲಿ ನಮಗೆ ವ್ಯಾಖ್ಯಾನಿಸಿ ಹೇಳಬಲ್ಲಂಥ ಕತೆ ಸಿಗುವುದು ಸ್ವಲ್ಪ ಕಷ್ಟ. ಈ ಕತೆಗಳ ಮಟ್ಟಿಗೆ ಹಾಗೆ ಮಾಡಿದಾಗಲೆಲ್ಲ ನಾವು ಕತೆಗಾರರಿಗೆ ಅನ್ಯಾಯವೆಸಗುತ್ತೇವೆ. ಛಾಯಾ ಅವರ ಗಮನ ಕಥನದ ಗಮ್ಯ, ಕೇಂದ್ರ, ಉದ್ದೇಶಗಳಿಗಿಂತ ಹೆಚ್ಚಾಗಿ ತಮ್ಮ ಕತೆಯ ಪರಿಸರ, ಒಟ್ಟು ಕಥನದ ಆವರಣ (ಆಕೃತಿ ಅಲ್ಲ), ಅಲ್ಲಿನ ಮನುಷ್ಯರ ನಡಾವಳಿ, ಬದುಕಿನ ದೈನಂದಿನದ ವಿವರಗಳು ಹೆಚ್ಚು ಜೀವಂತಿಕೆಯಿಂದ ಬರಬೇಕೆಂಬುದರ ಕಡೆಗೇ ಇರುವುದು ಸ್ಪಷ್ಟ. ಇಲ್ಲಿ ಅವರಿಗೆ ಇದನ್ನು ಕೇವಲ ತಂತ್ರವಾಗಿ ಬಳಸಿಕೊಳ್ಳುವುದಾಗಲೀ, ಓದುಗನಿಗೆ ಇಷ್ಟವಾಗಬಹುದಾದ ನಾಸ್ಟಾಲ್ಜಿಕ್ ನೆಲೆಯೊಂದನ್ನು ಬಳಸಿ ಅವನನ್ನು ಆಕರ್ಷಿಸುವುದಾಗಲೀ ಮುಖ್ಯವಾಗಿ ಕಂಡಿಲ್ಲ. ಹಾಗಾಗಿ ಅವರು ಸಾಮಾನ್ಯವಾಗಿ ಕತೆಗಾರರಲ್ಲಿ ಕಂಡು ಬರುವ ರಮ್ಯಚಿತ್ರಗಳಿಗೆ ಹೊರತಾದ ಒಂದು 'ದೈನಂದಿನದ ಕ್ಷುದ್ರತೆ' ಎಂದು ನಾನು ಉಲ್ಲೇಖಿಸಿದ ನೆಲೆಯಿಂದ ಅಂಥ ತಂತ್ರ ಮತ್ತು ನಾಸ್ಟಾಲ್ಜಿಕ್ ನೆಲೆಯನ್ನು ಕೆಡಹುತ್ತಾರೆ.

ಛಾಯಾ ಅವರು ತಮ್ಮ ಕತೆಗಳನ್ನು ಮುಗಿಸುವ ಬಗೆ ಕೂಡಾ ವಿಶೇಷ ಗಮನಕ್ಕೆ ಅರ್ಹವಾಗಿರುವ, ಅವರ ಕಥನ ಕಲೆಯ ಪ್ರಮುಖ ಎನ್ನಬಹುದಾದ ಲಕ್ಷಣವನ್ನು ತೋರಿಸುವ ಅಂಶ. ಅವರು ಕಥನ ಕುತೂಹಲಿಯಲ್ಲ. ಓದುಗರನ್ನು ಕಥನ